**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಯಲ್ಲಾಪುರ,**
**ಪೀಠಾಸೀನ ಮುಂಡಗೋಡ**

**ಇಲೆಕ್ಷನ್ ಪಿಟಪಿಷನ್. 1/2018**
**ಪಿ.ಡಬ್ಲೂ 2**

**ಹೆಸರು ಮಂಜುಳಾ ಪೂಜಾರ**
**ತಂದೆಯ ಹೆಸರು ಹೊಳೆಯಪ್ಪ**
**ವಯಸ್ಸು 35 ವರ್ಷ**
**ಉದ್ಯೋಗ ಪ್ರಿನ್ಸಿಪಾಲ್ ಮುಂಡಗೋಡ ಕಾಲೇಜ್**
**ವಾಸ್ತವ್ಯ ಮುಂಡಗೋಡ**

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿಃ 02-04-2019.**

**ಮುಖ್ಯ ವಿಚಾರಣೆ :** ವಾದಿಯ ಪರವಾಗಿ ಶ್ರೀ ಎನ್.ಆರ್.ಬಿ.ಕೆ. ವಕೀಲರಿಂದಃ

ನಾನು ಕಳೆದ ಎರುಡು ವರ್ಷಗಳಿಂದ ಸರಕಾರಿ ಫಸ್ಟ ಗ್ರೇಡ್ ಕಾಲೇಜು ಮುಂಡಗೋಡದಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಎದುರುದಾರ ಒಂದು ಇವರ ಪರಿಚಯವಿದೆ. ಎದುರುದಾರ ಒಂದು ನಮ್ಮ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಅವರನ್ನು 21-07-2018 ರಿಂದ ನೇಮಕ ಮಾಡಲಾಗಿತ್ತು, ಅವರು 27-08-2018 ರಿಂದ ಅವರು ಕರ್ತವ್ಯಕ್ಕೆ ಬರುತ್ತಿಲ್ಲ, ಈಗ ನಾನು ನಿಪಿ9 ನೋಡುತ್ತಿದ್ದು ಇದನ್ನು ನಾನೇ ಕೊಟ್ಟಿರುತ್ತೇನೆ. ನಿಪಿ9 ರಲ್ಲಿ ಬರೆದ ಎಲ್ಲಾ ವಿಷಯಗಳು ಸರಿಯಾಗಿವೆ. ಎದುರುದಾರ ಒಂದು ಇವರಿಗೆ ಪ್ರತಿತಿಂಗಳು ಹನ್ನೊಂದು ಸಾವಿರ ರೂಪಾಯಿ ಸರಕಾರದಿಂದ ಸಂಭಾವನೆ ಕೊಡಲಾಗುತ್ತಿತ್ತು, ಎದುರುದಾರ ಒಂದು ಇವಳಿಗೆ ದಿನಾಂಕಃ 27-08-2018 ರಂದು ಕೊನೆಯ ವೇತನ ಕೊಡಲಾಗಿತ್ತು, ಎದುರುದಾರ ಒಂದು ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವಾಗ ಚುನಾವಣೆಗೆ ಸ್ಪರ್ಧಿಸಿದ್ದರು. ಚುನಾವಣೆಗೆ ಸ್ಪರ್ಧಿಸುವ ಮೊದಲು ಎದುರುದಾರ ಒಂದು ತಾವು ಹೊಂದಿದ ಅತಿಥಿ ಉಪನ್ಯಾಸಕ ಹುದ್ದೆಗೆ ರಾಜೀನಾಮೆ ಸಲ್ಲಿಸಿರಲಿಲ್ಲ, ಎದುರುದಾರ ಒಂದು ಚುನಾವಣೆಗೆ ಸ್ಪರ್ಧಿಸಿದ ಸಂಗತಿ ನನಗೆ ಅನಧಿಕೃತವಾಗಿ ಗೊತ್ತಾಯಿತು. ಹಾಗೂ ಚುನಾವಣೆಯಲ್ಲಿ ಅವರು ಗೆದ್ದ ವಿಷಯವು ಗೊತ್ತಾಯಿತು. ಹೀಗೆ ಗೊತ್ತಾದ ನಂತರ ನಾನು ಎದುರುದಾರ ಒಂದು ಇವರಿಗೆ ಲಿಖಿತವಾಗಿ ಯಾವದೇ ನೋಟೀಸನ್ನು ಕೊಟ್ಟಿಲ್ಲ, ಸಾಕ್ಷಿ ಹೇಳುತ್ತಾರೆ ಜಂಟಿ ನಿರ್ದೇಶಕರು ಶಿಕ್ಷಣ ಇಲಾಖೆ ಇವರ ಸುತ್ತೋಲೆಯ ಪ್ರಕಾರ ಯಾವದೇ

ಅತಿಥಿ ಉಪನ್ಯಾಸಕರು, ಚುನಾವಣೆಗೆ ಸ್ಪರ್ಧಿಸಿ ಹಾಗೂ ಚುನಾವಣೆಯಲ್ಲಿ ಗೆದ್ದ ನಂತರ ರಾಜೀನಾಮೆ ಸಲ್ಲಿಸದೇ ಇದ್ದ ಪಕ್ಷದಲ್ಲಿ ಅವರ ಅತಿಥಿ ಉಪನ್ಯಾಸಕ ಹುದ್ದೆಗೆ ಆದ ನೇಮಕ ತನ್ನಿಂದ ತಾನೇ ರದ್ದಾಗುತ್ತದೆ. ಎದುರುದಾರ ಒಂದು ಇವರಿಗೆ ಜುಲೈ–ಅಗಸ್ಟ 2018 ವೇತನ ಪಾವತಿ ಮಾಡಿದ ಬಗ್ಗೆ ವಿವರ ಪಟ್ಟಿಯ ದೃಢೀಕೃತ ನಕಲನ್ನು ಈಗ ನಿಪಿ10 ಎಂದು ಗುರುತಿಸಲಾಯಿತು. ನಮ್ಮ ಕಾಲೇಜಿನ ದಾಖಲಾತಿ ಪ್ರಕಾರ ಎದುರುದಾರ ದಿಃ 27-08-2018 ರವರೆಗೆ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿರುತ್ತಾರೆ.

**ಪಾಟೀ ಸವಾಲು :** ಎದುರುದಾರ ಎರಡು ಪರವಾಗಿ ಶ್ರೀ ಎ.ಜಿ.ಪಿ. ವಕೀಲರಿಂದಃ

ಅತಿಥಿ ಉಪನ್ಯಾಸಕರಾಗಿ ಯಾವದೇ ವ್ಯಕ್ತಿ ಚುನಾವಣೆಗೆ ಸ್ಪರ್ಧಿಸಬೇಕಾದರೆ ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇಲ್ಲ ಹಾಗೂ ಗೆದ್ದ ನಂತರ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ಚುನಾವಣೆಯಲ್ಲಿ ಗೆದ್ದ ವ್ಯಕ್ತಿಗಳ ವಿವರ ಪತ್ರಿಕಾ ಮಾಧ್ಯಮದಲ್ಲಿ ಹಾಗೂ ಟಿ.ವಿ.ಗಳಲ್ಲಿ ಪ್ರಚಾರವಾಗುತ್ತದೆ ಎಂದರೆ ಸರಿ. ಈ ಪ್ರಚಾರದ ಮುಖಾಂತರ ನಮಗೆ ವಿಷಯ ತಿಳಿದು ಬಂದಲ್ಲಿ ಸಂಬಂಧಪಟ್ಟ ಅತಿಥಿ ಉಪನ್ಯಾಸಕರ ನೇಮಕಾತಿ ರದ್ದು ಪಡಿಸಬೇಕಾಗುತ್ತದೆ ಎಂದರೆ ಸರಿ. ಈ ಬಗ್ಗೆ ನಾವು ಪ್ರತ್ಯೇಕ ನೋಟೀಸು ಕೊಡುವ ಅವಶ್ಯಕತೆ ಇರುವದಿಲ್ಲ. ಎದುರುದಾರ ಒಂದು ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರು ವಿಷಯವನ್ನು ನಾನು ಎದುರುದಾರ ಎರಡು ಇವರ ಸಮಕ್ಷಮ ಯಾವದೇ ತಕರಾರು ಸಲ್ಲಿಸಿರುವದಿಲ್ಲ.

ಪಾಟೀ ಸವಾಲು ಎದುರುದಾರು ಎರಡು ಗೈರು ಹಾಜರು ಪಾಟೀ ಸವಾಲು ಇರುವದಿಲ್ಲ.

ಮರು ವಿಚಾರಣೆ ಇರುವುದಿಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಸಹಿ ಇದೆ

ಹಿರಿಯ ಸಿವಿಲ್ ಜಡ್ಜ್, ಯಲ್ಲಾಪುರ.

ಪೀಠಾಸೀನ ಮುಂಡಗೋಡ